

# ಭಂಡಾರ್ದಾರ

**ಮುಂಬೈ ನಾಸಿಕ್ ಹೆದ್ದಾರಿಯಲ್ಲಿ ಅಡ್ಡಕ್ಕೆ ತಿರುಗಿದರೆ ಸಿಗುವ ಈ ಜಲಧಾರೆಗಳ ಸ್ವರ್ಗ ಪ್ರವಾಸಿಗರ ಮನಸೂರೆಗೊಳ್ಳುತ್ತದೆ.**

ಚಿತ್ರ– ಲೇಖನ: **ರಮಣ್ ಶೆಟ್ಟಿ ರೆಂಜಾಳ್**

ಮುಂಬೈವಾಸಿಗಳಿಗೂ, ಹೊರ ಊರಿನಿಂದ ಬರುವವರಿಗೂ ಒಂದು ಅತ್ಯುತ್ತಮ ಪ್ರವಾಸಿ ತಾಣ ಭಂಡಾರ್ದಾರ. ಒಂದು ಅಥವಾ ಎರಡು ದಿನದ ಪ್ರವಾಸ ಹಾಕಿಕೊಳ್ಳುವವರಿಗೆ ಇಲ್ಲಿ ನೋಡಲು ಆಕರ್ಷಕ ತಾಣಗಳಿವೆ.

ಮಹಾರಾಷ್ಟ್ರದ ಅಹ್ಮದ್‌ನಗರ ಜಿಲ್ಲೆಗೆ ಸೇರಿದ ಈ ತಾಣ. ಪುಣೆಯಿಂದ 191 ಕಿ.ಮೀ ಹಾಗೂ ಮುಂಬೈಯಿಂದ ಕೇವಲ 185 ಕಿ.ಮೀ. ದೂರದಲ್ಲಿದೆ. ಮುಂಬೈ – ನಾಸಿಕ್ ರಸ್ತೆಯಲ್ಲಿ 159 ಕಿ.ಮೀ. ಸಾಗಿದ ನಂತರ ಸಿಗುವ ಇಗತ್ಪುರಿ ಪ್ರಸ್ಥಭೂಮಿಯಿಂದ ಬಲಕ್ಕೆ ತಿರುಗಿ 25 ಕಿ.ಮೀ. ಕ್ರಮಿಸಿದರೆ ಈ ತಾಣ ತಲುಪಬಹುದು.

ಅರ್ಥರ್ ಲೇಕ್, ವಿಲ್ಸನ್ ಡ್ಯಾಮ್, ರಾಂಧಾ ಫಾಲ್ಸ್, ಅಂಬ್ರೆಲ್ಲಾ ಫಾಲ್ಸ್.. ಭಂಡಾರ್ದಾರದ ಪ್ರಮುಖ ಅಕರ್ಷಣೆಗಳು.

**ವಿಲ್ಸನ್ ಅಣೆಕಟ್ಟು:** ಭಂಡಾರ್ದಾರದಲ್ಲಿ ಹರಿಯುತ್ತಿರುವ ಪ್ರವರ ನದಿಗೆ ಅಡ್ಡಲಾಗಿ 1910ರಲ್ಲಿ ಬ್ರಿಟಿಷರು ಕಟ್ಟಿಸಿರುವ ಈ ಅಣೆಕಟ್ಟು ಸಮುದ್ರಮಟ್ಟದಿಂದ 150 ಮೀಟರ್ ಎತ್ತರದಲ್ಲಿದೆ. ನೀರಿನ ಸಂಗ್ರಹಣೆ ಗರಿಷ್ಠ ಮಟ್ಟ ತಲುಪಿದಾಕ್ಷಣ ಇದರ ಗೇಟುಗಳನ್ನು ತೆರೆಯಲಾಗುತ್ತದೆ. ಆಗ ಕೆಳಗಿರುವ ಬಂಡೆಗಳ ಮೇಲ್ಮೈ ಮೂಲಕ ಹರಿದು 60ರಿಂದ 80 ಅಡಿಗಳಷ್ಟು ಕೆಳಗೆ ಸುರಿವ ಜಲಧಾರೆ ಹಲವು ಜಲಪಾತಗಳನ್ನು ಸೃಷ್ಟಿಸುತ್ತದೆ! ಅಂಬ್ರೆಲ್ಲಾ ಫಾಲ್ಸ್ ಹೆಸರಿನೊಂದಿಗೆ ಹರಿವ ಈ ಜಲಧಾರೆಗಳ ನೋಟವಂತೂ ನೋಡುಗರನ್ನು ಮಂತ್ರಮುಗ್ಧ ಗೊಳಿಸುತ್ತದೆ. ಕೆಳಸ್ತರದಲ್ಲಿ ದೈತ್ಯಾಕಾರದಲ್ಲಿ ನಿರ್ಮಿಸಿರುವ ಉದ್ಯಾನವನದಲ್ಲಿ ಪ್ರವಾಸಿಗರು ಮೈಮರೆತು ವಿಹರಿಸಬಹುದು. ಅಲ್ಲಿರುವ ಈಜು ಕೊಳದಲ್ಲಿ ಈಜಾಡಬಹುದು.

**ಅರ್ಥರ್ ಸರೋವರ:** ಪ್ರವರ ನದಿಯ ನೀರಿನ ಹರಿವಿನೊಂದಿಗೆ ಉಂಟಾಗಿರುವ ಅರ್ಥರ್ ಸರೋವರವು ಅರ್ಥರ್ ಹಿಲ್ ಸರೋವರವೆಂದೂ ಪ್ರಸಿದ್ಧಿ ಪಡೆದಿದೆ. ಈ ಸುವಿಶಾಲ ಸರೋವರವನ್ನು 1910ರಲ್ಲಿ ವಿಲ್ಸನ್ ಡ್ಯಾಮಿಗೆ ಜಲ ಸಂಗ್ರಹಾಲಯವಾಗಿ ಪರಿವರ್ತಿಸಲಾಗಿದ್ದು ಅಂದಿನಿಂದ ಪ್ರವಾಸಿಗರಿಗಾಗಿ ಬೋಟಿಂಗ್ ಸೌಲಭ್ಯವನ್ನೂ ಕಲ್ಪಿಸಲಾಗಿದೆ.